(Smt. Addy Saldanha)

tions in South Kanara District as it has got maximum number of High schools, Middle schools and Junior Colleges compared to other parts of the State ?

SRI M. MALLIKARJUNASWAMY (Minister for Education)

SMT. ADDI SALDHANA.—Considering all the aspects, will the Government think of having the Joint Directors Office in South Canara at least in the future ?

*SRI M. MALLIKARJUNASWAMY.—It is not desirable

ಶ್ರೀ ಎ. ಜಿ. ಕೊಡಗಿ :—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾಸಂಸ್ಥೆಗಳು ಮತ್ತು ಶಿಕ್ಷಕರ ಸಂಖ್ಯೆ ಹೆಚ್ಚು ಇರುವುದರಿಂದ ಅಲ್ಲಿ ಉಪಸಂಚಾಲಕರು ಒಬ್ಬರೇ ಒಬ್ಬರು ಇರುವುದರಿಂದ ಇಬ್ಬರನ್ನು ನೇಮಿಸಿ ವಿಭಾಗ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

SRI M. MALLIKARJUNSWAMY.—That is not before the Government.

DISTRIBUTION OF ARTIFICIAL MANURE

123. SRI S. KARIAPPA (Kanakapura).—Will the Minister for Agriculture and Animal Husbandry be pleased to state :—

(*a*) whether Government is aware of the fact that the distribution of artificial manure is not done properly;

(*b*) whether there is any proposal to issue cards in respect of distribution of artificial manures;

(*c*) if so, when this proposal would be implemented?

SRI N. CHIKKE GOWDA (Minister for Agriculture and Animal Husbandry).—

(*a*) No

(*b*) Yes

(*c*) It will be given effect to from 1st May 1974.

ಶ್ರೀ ಎಸ್. ಕರಿಯಪ್ಪ :—(ಎ) ಪ್ರಶ್ನೆಯ ಉತ್ತರದಲ್ಲಿ ಈ ಆರ್ಟಿಫಿಷಿಯಲ್ ಮೆನ್ಯೂರ್ ವಿತರಣೆ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿಲ್ಲ ಎಂದು ಉತ್ತರ ಬಂದಿದೆ. ಇದು ಸರ್ಕಾರದ ದೃಷ್ಟಿಯೊಳಗೆ ಸರಿಯಾಗಿ ನಡೆಯುತ್ತಿದೆ ಎಂದು ಭಾವಿಸಿಕೊಳ್ಳೋಣವೇ ?

‡ಶ್ರಿ ಎನ್. ಚಿಕ್ಕೇಗೌಡ :—ಗೊಬ್ಬರ ವಿತರಣೆ ಬಗ್ಗೆ ಕೆಲವು ಕಡೆ ಇರತಕ್ಕ ಅಪಾದನೆಗಳು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ನಿದರ್ಶನ ಕೊಟ್ಟರೆ ಉತ್ತರ ಹೇಳಬಹುದು.

ಶ್ರೀ ಎಸ್. ಕರಿಯಪ್ಪ : ಗೊಬ್ಬರ ವಿತರಣೆ ಬಗ್ಗೆ ಕಾರ್ಡು ಸಿಸ್ಟಂ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಇದು ಮೂಲ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರಕ್ಕೆ ವಿರುದ್ಧ ಆಗಿಲ್ಲವೇ ಗೊಬ್ಬರ ವಿತರಣೆ ಸರಿಯಾಗಿ ನಡೆಯುವ ಪಕ್ಷದಲ್ಲಿ ಕಾರ್ಡು ವಿತರಣೆಯ ಅವಶ್ಯಕತೆ ಏನು ಇದೆ ?

ಶ್ರೀ ಎನ್. ಚಿಕ್ಕೇಗೌಡ :—ಕಾರ್ಡು ಸಿಸ್ಟಂ ಜಾರಿಗೆ ತರಬೇಕೆಂಬುದನ್ನು ಸರ್ಕಾರ ಎರಡು ದೃಷ್ಟಿಯಿಂದ ಮಾಡಿದೆ. ಮೊದಲನೆಯದು ಗ್ರಾಮಸೇವಕರು ಮತ್ತು ವ್ಯವಸಾಯ ವಿಸ್ತರಣಾಧಿಕಾರಿಗಳು, ಬಿ. ಡಿ. ಓ. ಗಳು ಎನು ಇದ್ದಾರೆ ಅವರ ಜವಾಬ್ದಾರಿ ಏನು ಇದೆಯೋ ಅದರ ನಿರ್ವಹಣೆಗೆ ತೊಂದರೆಯಾಗುತ್ತದೆ ಎನ್ನುವುದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ ರೈತರು ಪರಮಿಟ್‌ಗೋಸ್ಕರ ಹೋಗಿ ಅಧಿಕಾರಿಗಳನ್ನು ನೋಡತಕ್ಕದ್ದನ್ನು ತಪ್ಪಿಸಬೇಕು ಎನ್ನುವುದು. ಆದುದರಿಂದ ಕಾರ್ಡಿನ ಮೇಲೆ ಗೊಬ್ಬರ ಹಂಚಬೇಕು ಎಂದು ಮಾಡಿದೆ. ಇತರೇ ರಾಜ್ಯಗಳಲ್ಲಿ ಸಹ ಇದ್ದು ಜಾರಿಯಲ್ಲಿ ಇರತಕ್ಕದ್ದನ್ನು ಗಮನಕ್ಕೆ ತೆಗೆದು ಕೊಂಡು ಈ ಕಾರ್ಡು ಸಿಸ್ಟಂ ಜಾರಿಗೆ ಕೊಡಬೇಕೆಂದ ತೀರ್ಮಾನ ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪ :— ಒದಗಿಸತಕ್ಕ ಗೊಬ್ಬರ, ಇರತಕ್ಕ ಜಮೀನು ವಿಸ್ತರಣೆಗೆ ಅನುಗುಣವಾಗಿದೆಯೇ ಅಥವಾ ಇಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ :—ಕರ್ನಾಟಕ ರಾಜ್ಯಕ್ಕೆ ಬೇಕಾದಷ್ಟು ಗೊಬ್ಬರ ನಮಗೆ ದೊರಕುತ್ತಾ ಇಲ್ಲ. ಆದರೆ ಕಾರಣ ಮಾನ್ಯ ಸದಸ್ಯರಿಗೆ ಗೊತ್ತಿದೆ, ಮತ್ತು ಈ ಸದನಕ್ಕೆ ಗೊತ್ತಿದೆ. ಈ ಗೊಬ್ಬರಕ್ಕೆ ಬೇಕಾದ ಮೂಲವಸ್ತು ನಫ್‌ಥಾ ದೊರಕದೆ ಇರುವುದರಿಂದ, ಅಂತರ್ ರಾಷ್ಟ್ರೀಯ ಮಾರುಕಟ್ಟೆ ಬೆಲೆ ಏರಿರುವುದರಿಂದ ಮತ್ತು ಎಣ್ಣೆ ಬೆಲೆ ಏರಿರುವುದರಿಂದ, ಈ ಒಂದು ಅಭಾವ ಬಂದಿದೆ. ನಮಗೆ ಬೇಕಾದಷ್ಟು ಗೊಬ್ಬರ ಪೂಲ್ ಪರ್‌ಚೇಸ್‌ನಿಂದ ದೊರಕುತ್ತಾ ಇಲ್ಲ. ಆದುದರಿಂದ ನಿರ್ದಿಷ್ಟವಾಗಿ ಒಂದು ಎಕರೆಗೆ ಬೇಕಾದಂಥ ಗೊಬ್ಬರ ಕೊಡುವುದಕ್ಕಾಗುತ್ತಿಲ್ಲ.

SRI D. B. KALMANKAR :—In reply you have stated that it will be given effect to from 1st May 1974. May I know what will be the criteria to issue cards to farmers ?

SRI N. CHIKKE GOWDA :—Every farmer in this State will get the cards. There are about 37 lakhs individual families in the State. All of them will get individual cards. In those cards the extent of land, under different crops, irrigated crops or non-irrigated crops, dry, seasonal crops, etc., will be mentioned and the statistics relating to farmers' holdings, acreage, etc., will also be mentioned.

ಶ್ರೀ ಹೆಚ್. ಜಿ. ಚೆನ್ನಪ್ಪ :—ಕಾರ್ಡ್ ಮೂಲಕ ಗೊಬ್ಬರ ಕೊಡುತ್ತೀವೆ ಎಂದು ಹೇಳುತ್ತೀರಿ. ಯಾವ ರೈತನಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಗೊಬ್ಬರ ಕೊಡಬೇಕು. ಎನ್ನುವುದನ್ನು ಯಾವ ಆಧಾರದ ಮೇಲೆ ನಿಗದಿ ಮಾಡುತ್ತಿರಿ ?

ಶ್ರೀ ಎನ್. ಚಿಕ್ಕೇಗೌಡ :—ಗೊಬ್ಬರ ಕೊಡಬೇಕಾದರೆ ಅದರ ಪ್ರಯೂರಿಟಿ ಫಿಕ್ಸ್ ಮಾಡುತ್ತೀವೆ. High yielding varieties under irrigated conditions, seed production programme ಮತ್ತು ವರ್ಜೀನಿಯಾ ಟೊಬ್ಯಾಕೋ ಬೆಳೆಯುತಕ್ಕವರು ಯಾರು ಇರುತ್ತಾರೆ. ಅವರನ್ನು ಗಮನದಲ್ಲಿ ಇಟ್ಟುಕೊಂಡು ಆ ಮೇಲೆ ಲಾಸ್ಟ್ ಕ್ಯಾಟಗರಿ ಡ್ರೈ ಕ್ರಾಪ್ಸ್ ಬೆಳೆಯುತಕ್ಕವರಿಗೆ ಕೊಡುತ್ತೀವೆ. ಹೈಯಿಲ್ಡಿಂಗ್ ವೆರೈಟೀಸ್ ಮತ್ತು ಹೈಬ್ರಿಡ್ ವರೈಟೀಸ್ ಬೆಳೆಗಳಿಗೆ ಆರ್ಟಿಫಿಷಿಯಲ್ ಫರ್ಟಿಲೈಸರ್ಸ್ ಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟು ಕೊಂಡು ಕೊಡುತ್ತೀವೆ. ಇನ್ನು ಲೆವಿ ಕೊಡುವವರಿಗೆ ಅಡಿಷನಲ್ ಇನ್‌ಸೆಂಟೀವ್ ಆಗಿ ಪ್ರತಿ ಕ್ವಿಂಟೋಲ್‌ಗೆ 5 ಕೆ. ಜಿ. ನೈಟ್ರೋಜಿನ್ ಕೊಡುತ್ತೀವೆ.

ಶ್ರೀ ಅಂದಾನಯ್ಯ :—ಕಳೆದ ಡಿಸೆಂಬರ್ ತಿಂಗಳಿನಲ್ಲಿ ಯಾವುದೇ ಬೆಳೆ ತೆಗೆಯದಿದ್ದರೂ, ಜಾಯಿಂಟ್ ಡೈರೆಕ್ಟರ್ ಗೊಬ್ಬರ ಕೊಟ್ಟಿದ್ದಾರೆ. ಅದನ್ನು ತೆಗೆದುಕೊಂಡು ಹೋದ ಸೊಸೈಟಿಯವರು ಬ್ಲಾಕ್ ಮಾರ್ಕೆಟಿನಲ್ಲಿ ಮಾರಿದ್ದಾರೆ. ಇದರ ಬಗ್ಗೆ ಅರ್ಜಿ ಕೊಟ್ಟಿದ್ದೇನೆ. ತನಿಖೆ ಮಾಡಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ :—ಪ್ರತ್ಯೇಕ ಕೇಸ್ ಏನು ರೆಫರ್ ಮಾಡುತ್ತ ಇದ್ದೀರಿ, ಅದು ನನ್ನ ಮುಂದೆ ಇಲ್ಲ. ಸಂಬಂಧಪಟ್ಟ ದೂರು ಬಂದಿದೆ. ವಿಚಾರಣೆ ಮಾಡಿಸುತ್ತಿದ್ದೇನೆ. ವರದಿ ಬಂದನಂತರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ದಮಯಂತಿ ಬೋರೇಗೌಡ ;—ಕಳೆದ ಸಾಲು ಕಬ್ಬು ಬೆಳೆದು ಈ ಸಲ ಭತ್ತ ಬೆಳೆಯುವವರಿಗೆ ನೀವು ಯಾವ ರೀತಿ ಗೊಬ್ಬರ ಒದಗಿಸಿ ಕೊಡುತ್ತೀರಿ ?

ಶ್ರೀ ಚಿಕ್ಕೇಗೌಡ :—ಆಗಲೇ ಹೇಳಿದೆ, ಕಾರಿಫ್ ಮತ್ತು ರಾಬಿ ಸೀಸನ್ ಎಂದು ಎರಡು ಸೀಜನ್ ಇವೆ. ಆಯಾಯ ಸೀಜನ್ನಿನಲ್ಲಿ ಏನೇನು ಬೆಳೆ ಬೆಳೆಯುತ್ತಾರೆ ಎಂದು ಐಡೆಂಟಿಫೈ ಕಾರ್ಡಿನಲ್ಲಿ ನಮೂದಿಸಿದ್ದೇವೆ. ಅದರ ಪ್ರಕಾರ ಗೊಬ್ಬರ ಕೊಡುತ್ತೇವೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ :—ನಿಮ್ಮ ಅಭಿಪ್ರಾಯ ಈಗ ಕಾರ್ಡು ಇಷ್ಯೂ ಮಾಡಿದರೆ ಕಾರ್ಡು ತೆಗೆದುಕೊಂಡು ಹೋಗಿ ತೋರಿಸಿದರೆ ಗೊಬ್ಬರ ತೆಗೆದುಕೊಳ್ಳಬಹುದು. ಅಂತಲೇ ?

ಶ್ರೀ ಎನ್. ಚಿಕ್ಕೇಗೌಡ :—ನೇರವಾಗಿ ಸಹಕಾರ ಸಂಘಕ್ಕಾಗಲಿ, ಅಗ್ರೋ ಕೇಂದ್ರಕ್ಕಾಗಲೀ ಅಥವಾ ಖಾಸಗಿ ವ್ಯಾಪಾರ ಮಾಡುವವರ ಕಡೆ ಆಗಲೀ ಕಾರ್ಡು ತೋರಿಸಿದರೆ ಕಾರ್ಡಿನಲ್ಲಿ ನಮೂದಿಸಿರುವಷ್ಟು ಗೊಬ್ಬರ ಅವರು ಕೊಡುತ್ತಾರೆ.

ಶ್ರೀ ಹಂಪಿ ಶಿವಣ್ಣ.—ನೀರು ಹರಿಯುತಕ್ಕ ಸ್ಥಳಗಳಲ್ಲಿ ಬೆಳೆ ಬೆಳೆಯುವ ಕಡೆ ಗೊಬ್ಬರ ಕೊಡತಕ್ಕದ್ದು ವಾಡಿಕೆ. ಆದರೆ ಖುಷ್ಕಿ ಜಮೀನಿಗೆ ಇಲಾಖೆಯವರು ಗೊಬ್ಬರ ಕೊಟ್ಟಿದ್ದಾರೆ. ಯೂರಿಯಾಕ್ಕೆ ಕ್ವಿಂಟೋಲ್ ಒಂದಕ್ಕೆ 112 ರೂಪಾಯಿ ಹೊರಗಡೆ ಇದ್ದರೆ ಇಲಾಖೆಯವರು 51 ರೂಪಾಯಿಯಂತೆ ಮಾರುತ್ತಾರೆ. ಅಮೋನಿಯ ಸಲ್ಫೇಟ್ ಕ್ವಿಂಟೋಲ್ ಒಂದಕ್ಕೆ 64 ರೂಪಾಯಿನಂತೆ ಕೊಡುತ್ತಾರೆ. ಹೊರಗಡೆ 2 0-220 ರೂಪಾಯಿಗೆ ಮಾರಾಟ ಮಾಡುತ್ತಾರೆ. ಖುಷ್ಕಿ ಜಮೀನುಗಳಿಗೆ ಗೊಬ್ಬರ ಹಂಚಿದ್ದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿರಾ ?

ಶ್ರೀ ಎನ್. ಚಿಕ್ಕೇಗೌಡ.—ಖುಷ್ಕಿ ಜಮೀನಿಗೆ ಕೊಡಕೂಡದು ಎಂದು ಹೇಳಲಿಲ್ಲ. ಗೊಬ್ಬರ ಕೊಡುವ ಕಾಲದಲ್ಲಿ ಹೈಬ್ರಿಡ್ ವೆರೈಟೀಸ್ ಹೈಯೀಲ್ಡಿಂಗ್ ವೆರೈಟೀಸ್ ಮತ್ತು ಸೀಡ್ ಪ್ರೊಡಕ್ಷನ್ ಪ್ರೋಗ್ರಾಂ ಕೊಟ್ಟಮೇಲೆ ಇನ್ನು ಗೊಬ್ಬರ ಇದ್ದರೆ ಖುಷ್ಕಿ ಬೆಳೆಗೂ ಕೊಡಬೇಕು ಎಂದು ಇದೆ. ಇತರ ಕ್ಷೇತ್ರದಲ್ಲಿ ಏನು ಮಾಡಿದ್ದಾರೆ ಅದನ್ನು ಗಮನಿಸಿ ರಿಪೋರ್ಟ್ ಬಂದ ತಕ್ಷಣ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್:—ಖುಷ್ಕಿ ಜಮೀನಿನಲ್ಲಿ ಬೇಸಿಗೆಯಲ್ಲಿ ಯಾವ ಬೆಳೆಯನ್ನೂ ಬೆಳೆಯುವುದಿಲ್ಲ. ಅಂಥಾವರಿಗೆ ಕೊಡುತ್ತೇವೆ, ಎಂದು ಹೇಳಿದರೆ ಯಾವ ಬೆಳೆ ಬೆಳೆಯಲಿ, ಬೆಳೆಯದೇ ಇರಲಿ ಅವರಿಗೆ ಅಧಿಕಾರಿಗಳು ಕೊಟ್ಟಿದ್ದರೆ, ತಪ್ಪಾಗುತ್ತದೆ. ಅವರಿಗೆ ಬೇಸಿಗೆಯಲ್ಲಿ ಗೊಬ್ಬರವನ್ನು ಕೊಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆ ರೀತಿ ಬೇಸಿಗೆ ಕಾಲದಲ್ಲೂ ಅಂಥಾವರಿಗೆ ಗೊಬ್ಬರ ಕೊಡುತ್ತಾ ಇದ್ದರೆ ಅದನ್ನು ತಪ್ಪಿಸಬೇಕು, ತಪ್ಪಿಸೋಣ ಎಲ್ಲಿ ಬಾವಿಗಳು ತೋಡಿದ್ದಾರೆ, ಎಲ್ಲಿ ಪಂಪ್‌ಸೆಟ್ಟುಗಳನ್ನು ಇಟ್ಟಿದ್ದಾರೆ, ಅವರಿಗೆ ಬೇಸಿಗೆಯಲ್ಲಿ ಬೆಳೆಯನ್ನು ಬೆಳೆಯುವುದಕ್ಕೆ ಗೊಬ್ಬರವನ್ನು ಕೊಡೋಣ. ಕೆಲವು ಕಡೆಗಳ ಕೆಳಗಡೆ, ಕೆಲವು ನಾಲೆಗಳ ಕಡೆಗೆ ಬೆಳೆಯನ್ನು ಬೆಳೆಯುವುದಾದರೆ ಅವರಿಗೂ ಕೊಡೋಣ. ಬೇಸಿಗೆಯಲ್ಲಿ ನೀರು ಇಲ್ಲದೆ ಯಾವ ಖುಷ್ಕಿಯಲ್ಲೂ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಅದರಲ್ಲಿ ಫುಡ್ ಕ್ರಾಪ್ಸ್ ಬೆಳೆ ಬೆಳೆಯುವವರಿಗೆ ಟಾಪ್ ಪ್ರಿಯಾರಿಟಿ ಕೊಡಬೇಕೆಂದು ಇದೆ ಅದರಲ್ಲೂ ನೀರಾವರಿಯಲ್ಲಿ ಆಗತಕ್ಕಂಥ ಕಡೆ ಫುಡ್ ಕ್ರಾಪ್ಸ್ ಬೆಳೆದರೆ ಅವರಿಗೆ ಪ್ರಿಯಾರಿಟಿ ಕೊಡೋಣ. ಆದರೆ ಕಬ್ಬಿನ ಬೆಳೆಗೆ ಪ್ರಿಯಾರಿಟಿ ಕೊಡುವುದಾದರೆ ಅದು ನಂತರ ಬರುತ್ತದೆ. ನಮ್ಮಲ್ಲಿ ಭತ್ತ ಬೆಳೆ ಬೆಳೆದವರಿಗೆ ಮೊದಲು ಗೊಬ್ಬರ ಕೊಡಬೇಕಾಗುತ್ತದೆ. ನಂತರ ಬಾಕಿಯವರಿಗೆ ಕೊಡಿಸೋಣ. ಅದರಲ್ಲೂ ಎಲ್ಲಕ್ಕಿಂತ ಹೆಚ್ಚಾಗಿ ಭತ್ತ ಲೆವಿ ಕೊಡತಕ್ಕಂಥಾವರಿಗೆ ಫಸ್ಟ್ ಪ್ರಿಯಾರಿಟಿ ಕೊಡಬೇಕಾಗುತ್ತದೆ. Even farmers who have got wet lands or wet cultivations will get priority. I think the House would appreciate the point in view of the fact that there is lot of complaint about shortage of fertilisers and its misuse Therefore the Government's policy now is to see that only farmers who have wet lands get priority and those who give the levy also would get pricrity.

ಶ್ರೀ ಕೆ. ಹೆಚ್. ಹನುಮೆಗೌಡ:—ತಾವು ಕಾಡುಗಿ ಸಿಸ್ಟಂ ಮುಖಾಂತರ ಗೊಬ್ಬರವನ್ನು ಹಂಚುತ್ತೇವೆ, ಎಂದು ಹೇಳಿದ್ದಿರಿ. ಬಹಳ ಸಂತೋಷ ಪ್ರೈವೇಟ ಮೂಲೀಕರುಗಳು ಏನು ಇರುತ್ತಾರೋ ಅವರು ಮತ್ತು ಅಗ್ರೋ ಕೇಂದ್ರಗಳ

ಏನು ಇರುತ್ತದೋ ಅಲ್ಲಿ ಹಂಚುವ ವ್ಯವಸ್ಥೆ ಈಗ ಇರುವ ಸಿಸ್ಟಂ ಪ್ರಕಾರ ಇದೆ. ಆದರೆ ಈವಾಗ ಏನಾಗಿದೆ ಎಂದರೆ ಅಗ್ರೋ ಕೇಂದ್ರಗಳು ಇರುವುದು ಬರೇ ಟೌನ್ ನಲ್ಲಿ ಮಾತ್ರ. ಪ್ರೈವೇಟ್ ಮಾಲೀಕರುಗಳಿಗೆ ಗೊಬ್ಬರ ಬಂದರೆ ರೈತರಿಗೆ ಇನ್‌ಫರ್ಮೇಷನ್ನೇ ಗೊತ್ತಾಗುವುದಿಲ್ಲ ಆದುದರಿಂದ ನನ್ನ ಪ್ರಶ್ನೆ ಏನೆಂದರೆ ಮೊದಲೇ ಅವರುಗಳ ಹತ್ತಿರ ಕಾರ್ಡೆ ಕಲೆಕ್ಟ್ ಮಾಡಿಕೊಂಡು ಗೊಬ್ಬರ ಬಂದ ನಂತರ ತಕ್ಷಣ ಕೊಡಿಸುವುದಕ್ಕೆ ಏರ್ಪಾಡು ಮಾಡಿಕೊಟ್ಟರೆ ಒಳ್ಳೆಯದು ಇಲ್ಲದೇ ಹೋದರೆ ಪ್ರೈವೇಟ್ ಮಾಲೀಕರುಗಳು ಗೊಬ್ಬರವನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇದನ್ನು ತಪ್ಪಿಸುವ ದೃಷ್ಟಿಯಿಂದ ಈಗ 5-10 ಹಳ್ಳಿಗಳಿಗೆ ಒಂದೊಂದು ಸೊಸೈಟಿಗಳು ಏನು ಇರುತ್ತದೋ ಅಥವಾ ವಿಲೇಜ್ ಪಂಚಾಯಿತಿ ಏನು ಇರುತ್ತದೋ ಅವರ ಮುಖಾಂತರ ಗೊಬ್ಬರವನ್ನು ಸಮರ್ಪಕವಾಗಿ ಹಂಚುವ ವ್ಯವಸ್ಥೆ ಮಾಡಿದರೆ ಪ್ರೈವೇಟ್ ಮಾಲೀಕರುಗಳು ಮಿಸ್‌ಯೂಸ್ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಆ ರೀತಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್ ಚಿಕ್ಕೇಗೌಡ : ಈಗ ಇದರಲ್ಲಿ ಎರಡು ತರಹ ಸಿಸ್ಟಂ ಇದೆ. (1) ಪೂಲ್ ಫರ್ಟಿಲೈಸರ್ಸ್ (2) ನಾನ್ ಪೂಲ್ ಫರ್ಟಿಲೈಸರ್ಸ್ ಅಂತ ಇದೆ. ಪೂಲ್ ಫರ್ಟಿಲೈಸರ್‌ಗೆ ಗೊಬ್ಬರವನ್ನು ನೇರವಾಗಿ ಕೇಂದ್ರ ಸರ್ಕಾರದವರೇ ಕೊಡುತ್ತಾರೆ. ನಾನ್‌ಪೂಲ್ ಫರ್ಟಿಲೈಸರ್ಸ್‌ಗೆ ಎಂದರೆ ಮದ್ರಾಸ್ ಫರ್ಟಿಲೈಸರ್ಸ್ ಮತ್ತು ಜುವಾರಿಯಿಂದ ಏಜೆನ್ಸಿಗೆ ಬರತಕಂಥಾದ್ದು. ಆದುದರಿಂದ ಪ್ರೈವೇಟ್ ಮಾಲೀಕರುಗಳಿಗೆ ಬರತದ್ಕಂಥಾ ಗೊಬ್ಬರವನ್ನು ಆಗಲಿ ಯಾವುದೇ ಆಗಲಿ ಅವರು ಪರ್ಮಿಟ್ ಇಲ್ಲದೇ ಕೊಡುವುದಕ್ಕಾಗುವುದಿಲ್ಲ. ಈಗ 37 ಲಕ್ಷ ಕಾರ್ಡುಗಳನ್ನು ಹಂಚಬೇಕೆಂದು ಸರ್ಕಾರದವರು ಅಚ್ಚು ಹಾಕಿಸಿಕೊಂಡಿದ್ದಾರೆ. ಅದನ್ನು ಬಿ.ಡಿ.ಒ. ಮುಖಾಂತರವಾಗಲಿ ಅಥವಾ ತಾಸೀಲ್ದಾರರ ಮುಖಾಂತರ ವಾಗಲಿ ರೈತರಿಗೆ ನೇರವಾಗಿ ಕೊಡುತ್ತಾರೆ. ಆ ರೀತಿ ಕೊಟ್ಟಮೇಲೆ ಅದನ್ನು ಅವರು ದುರುಪಯೋಗ ಮಾಡಿಕೊಳ್ಳುವುದಾದರೆ ಅದು ರೈತರ ಜವಾಬ್ದಾರಿ ಆಗುತ್ತದೇ ವಿನಾ ಮುತ್ತಾರೂ ಜವಾಬ್ದಾರಿ ಆಗುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ : ಸ್ವಾಮಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ವಿವರಣೆ ಮತ್ತು ಹೇಳಿದ ಉತ್ತರ ನೋಡಿದರೆ ತಾರೀಖು 1-5-74 ರಿಂದ ಗೊಬ್ಬರಕ್ಕೆ ಕಾರ್ಡ್ ಸಿಸ್ಟಂನ್ನು ಏನು ಇಂಟ್ರಡ್ಯೂಸ್ ಮಾಡುತ್ತಾರೋ ಇದಕ್ಕೇನಾದರೂ ಕ್ರಾಪ್ ಪ್ರೋಡಕ್ಷನ್ ಪ್ಲಾನ್ಡ್ ಪ್ರೋಗ್ರಾಂ ಏನಾದರೂ ಇದೆಯೇ ? ಏತಕ್ಕೆಂದರೆ ಯಾವ ರೈತ ಯಾವ ಕಾಲದಲ್ಲಿ ಏನು ಬೆಳೆಯುತ್ತಾನೆ, ಎಷ್ಟು ವಿಸ್ತೀರ್ಣದಲ್ಲಿ ಯಾವ ಬೆಳೆ ಬೆಳೆಯುತ್ತಾನೆ ಎಂದು ತಿಳಿದುಕೊಳ್ಳಲು

(ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ)

ಈ ಕ್ರಾಪ್ ಪ್ಲಾನ್ಡ್ ಪ್ರೊಗ್ರಾಂನಲ್ಲಿ ಗೊತ್ತಾಗುತ್ತದೆ. ಅದು ಅಲ್ಲದೇ ಹೋದರೆ ಯಾವ ಬೆಳೆ ಬೆಳೆಯಲ್ಲಿ ಬೆಳೆಯದೇ ಇರಲಿ ಆ ರೈತನಿಗೂ ಗೊಬ್ಬರ ಸಿಕ್ಕುವ ಅವಕಾಶ ಇರುತ್ತದೆ. ಇದರಿಂದ ಆ ಗೊಬ್ಬರವನ್ನು ತೆಗೆದುಕೊಂಡು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ಕ್ರಾಪ್ ಪ್ಲಾನ್ಡ್ ಪ್ರೋಗ್ರಾಂನಂತೆ ಅವನಿಗೆ ಗೊಬ್ಬರ ಕೊಡುವುದರಿಂದ ದೇಶದಲ್ಲಿ ಆಹಾರೋತ್ಪತ್ತಿಯೂ ಕೂಡ ಹೆಚ್ಚುತ್ತದೆ. ಆ ರೀತಿ ಕ್ರಾಪ್ ಪ್ಲಾನ್ಡ್ ಪ್ರೋಗ್ರಾಂನಂತೆ ಗೊಬ್ಬರ ಕೊಡಬೇಕು ಎನ್ನುವ ಆಲೋಚನೆ ಇದೆಯೋ ?

ಶ್ರೀ ಡಿ. ದೇವರಾಜ್ ಅರಸ್ : ಅದು ಮಾನ್ಯ ಸದಸ್ಯರ ಅಭಿಪ್ರಾಯ. ಆ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯವನ್ನೂ ಕೂಡ ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಸ್ವಾಮಿ, ನಮ್ಮ ರಾಜ್ಯದಲ್ಲಿ ರೇಷ್ಮೆ ವ್ಯವಸಾಯ ಒಂದು ಪ್ರಾಮುಖ್ಯವಾದದ್ದು ಎಂದು ಎಲ್ಲರಿಗೂ ಗೊತ್ತಿದೆ. ಅವರು ಅದಕ್ಕೆ ನೈಟ್ರೇಟ್ ಗೊಬ್ಬರವನ್ನು ಉಪಯೋಗಿಸುವುದರಿಂದ ಅವರಿಗೂ ಒಂದು ಭಾಗ ಗೊಬ್ಬರವನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಡಿ. ದೇವರಾಜ ಅರಸ್ :—ಮಾನ್ಯ ಸದಸ್ಯರು ಹೇಳುವುದನ್ನೂ ಸಹ ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಟಿ ಆರ್ ಶಾಮಣ್ಣ :—ನಮ್ಮ ದೇಶದಲ್ಲಿ ರಾಸಾಯನಿಕ ಗೊಬ್ಬರದ ಉತ್ಪನ್ನ ಕಡಿಮೆಯಾಗಿರುವುದರಿಂದ ಅಭಾವಕ್ಕೆ ಕಾರಣವಾಗಿದೆ ಆದುದರಿಂದ ಈ ತೊಂದರೆಯನ್ನು ತಪ್ಪಿಸುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ : ಅದಕ್ಕೋಸ್ಕರವಾಗಿಯೇ ಮಂಗಳೂರಿನಲ್ಲಿ ನಾವು ಇನ್ನೊಂದು ಫರ್ಟಿಲೈಸರ್ಸ್ ಕಾರ್ಖಾನೆ ಮಾಡುತ್ತಿದ್ದೇವೆಯೇ ಅದರಲ್ಲಿ ಇಷ್ಟರಲ್ಲಿಯೇ ಉತ್ಪನ್ನ ಬರಬಹುದು. ಮತ್ತು ಆ ಕಾರ್ಖಾನೆಗೆ ಫರ್ಟಿಲೈಸರ್ ಉತ್ಪನ್ನ ಹೆಚ್ಚು ಮಾಡಲು ಒಂದು ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಂ ಕೂಡ ಕೇಂದ್ರ ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಆ ಕಾರ್ಖಾನೆಯಲ್ಲಿ ಗೊಬ್ಬರದ ಉತ್ಪಾದನೆ ಆದಮೇಲೆ ಬಹುಮಟ್ಟಿಗೆ ನಮ್ಮ ದೇಶದಲ್ಲಿ ಗೊಬ್ಬರದ ಅಭಾವ ಕಡಿಮೆಯಾಗಬಹುದು.

ಶ್ರೀ ಟಿ. ಎಂ. ಮಂಜುನಾಥ್ :—ಸ್ವಾಮಿ, ಕಾಫಿ ಎಸ್ಟೇಟ್‌ಗೆ ಇದರಲ್ಲಿ ಏನೂ ಇಲ್ಲ. ಅವರಿಗೂ ಕೂಡ ನೇರವಾಗಿ ಗೊಬ್ಬರ ಕೊಡುವ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎನ್ ಚಿಕ್ಕೇಗೌಡ :—ಆ ಬಗ್ಗೆ ಕೇಂದ್ರ ಸರ್ಕಾರದವರೇ ನೇರವಾಗಿ ಕಾಫಿ ಬೋರ್ಡ್‌ಗೆ ಕೊಟ್ಟುಬಿಡುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ :—ಸ್ವಾಮಿ ಈ ರಾಸಾಯನಿಕ ಗೊಬ್ಬರದ ವಿತರಣೆ ಸರಿಯಾಗಿ ಸಮರ್ಪಕವಾಗಿ ಆಗಿಲ್ಲದೇ ಇರುವುದರಿಂದ ಈವೊತ್ತಿನ ದಿವಸ ಗೊಬ್ಬರ ಸಿಕ್ಕುವುದು ಅಭಾವವಾಗಿದೆ. ಅದಕ್ಕೆ ನನ್ನ ಅಭಿಪ್ರಾಯ ಏನೆಂದರೆ ಸರ್ಕಾರ ಈ ಬಗ್ಗೆ ಒಂದು ಆದೇಶವನ್ನು ಹೊರಡಿಸಿ, ಆ ಆದೇಶದಂತೆ ಯಾರು ಮಾರುವುದಿಲ್ಲವೋ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ ಮಾಡಿದರೆ ಸರಿಹೋಗುತ್ತದೆ. ಅದುದರಿಂದ ಆರೀತಿ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ :—ಪರ್ಮಿಟ್ ಕೊಡುವುದರಲ್ಲಿ ಅವರು ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವ ಉದ್ದೇಶದಿಂದಲೇ ಈ ಕಾರ್ಡ್ ಸಿಸ್ಟಂ ಇಂಟ್ರಡ್ಯೂಸ್ ಮಾಡಿರುವ ಉದ್ದೇಶ. ಈಗ ಮಾನ್ಯ ಸದಸ್ಯರು ಏನು ಹೇಳಿದರೋ ಆ ಬಗ್ಗೆ ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ತಿಳಿಸಿದರೆ ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಕರಿಯಪ್ಪ :—ಸ್ವಾಮಿ, ಹೋಲ್‌ಸೇಲ್ ಡಿಸ್ಟ್ರಿಬ್ಯೂಟರ್ಸ್ ಏನು ಇರುತ್ತಾರೋ ಅವರಿಗೆ ತಮ್ಮ ಮನಸ್ಸಿಗೆ ಬಂದಂತೆ ಮಾರಿಕೊಳ್ಳುವುದಕ್ಕೆ ಸ್ವಲ್ಪಭಾಗವನ್ನು ಕೊಡುತ್ತಾರೆ. ಅದುದರಿಂದ ಸ್ವಲ್ಪ ಮಟ್ಟಿಗೆ ಗೊಬ್ಬರದ ಅಭಾವಾಗಿರುವುದಕ್ಕೆ ಕಾರಣ ಆದುದರಿಂದ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನಾದರೂ ಆಲೋಚನೆ ಮಾಡುತ್ತಾರೆಯೇ ?

ಶ್ರೀ ಎನ್ ಚಿಕ್ಕೇಗೌಡ :—ಹೋಲ್‌ಸೇಲ್ ಮನುಫ್ಯಾಕ್ಚರರ್ಸ್ ಏನು ಇದ್ದಾರೆ ಅವರಿಗೆ ಮದ್ರಾಸ್ ಫರ್ಟಿಲೈಸರ್ಸ್ ಮತ್ತು ಜುವಾರಿಯಿಂದ ಏನು ಗೊಬ್ಬರ ಬರುತ್ತದೆ. ಅದನ್ನು ಕೇಂದ್ರಸರ್ಕಾರದವರೇ ಒಂದು ರೇಟನ್ನು ನಿಗದಿ ಮಾಡಿ ಅವರಿಗೆ ಕಳುಹಿಸುತ್ತಾರೆ. ಆ ರೇಟ್ ಪ್ರಕಾರ ಡಿಸ್ಟ್ರಿಬ್ಯೂಟರ್ಸ್ ಆಗಲಿ ಏಜೆನ್ಸಿಯವರಾಗಲಿ ಮಾರಬೇಕು. ಅವರು ಹೆಚ್ಚಿಗೆ ಬೆಲೆಯಲ್ಲಿ ಮಾರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

MADAM SPEAKER :—Questions are over now.